ಸಮಗ್ರವಾದ ತನಿಖೆಯನ್ನು ಮಾಡತಕ್ಕಂಥ ರೀತಿಯಲ್ಲಿ ಸಿ.ಒ.ಡಿ.ಗೆ ನಾವು ಹೇಳಿದ್ದೇನೆ. ನೀವು ಏನು ಹೇಳಿದ್ದೀರಿ. ಸಸ್ಪೆಂಡ್ ಮಾಡತಕ್ಕಂಥದ್ದನ್ನು ಈಗಲೇ ಹೇಳಬೇಕು ಎಂದು ಹೇಳುತ್ತೀರಿ. ಸಸ್ಪೆಂಡ್ ಮಾಡತಕ್ಕಂಥದ್ದನ್ನು ಈಗಲೇ ಹೇಳಬೇಕು ಎಂದು ಹೇಳುತ್ತೀರಿ. ಅವನನ್ನು ನಾವು ಅಲ್ಲಿ ಇಟು ನಿಷ್ಪಕ್ಷಪಾತವಾದ ತನಿಖೆಯನ್ನು ಮಾಡುವುದಕ್ಕಾಗುವುದಿಲ್ಲ, ಅವನನ್ನು ತೆಗೆಯಬೇಕು ಎಂದು ನಾನು ಕೂಡ ಹೇಳಿದ್ದೇನೆ. ಸಸ್ಪೆಂಡ್ ಮಾಡತಕ್ಕಂಥದ್ದು ಬೇರೆ ವಿಚಾರಗಳು ಏನಾಗಿದೆ. ಸಮಕ್ಷಮ ತಾವು ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಅಷ್ಟೇನೂ ದೀರ್ಘವಾದ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇಲ್ಲ, ಮತ್ತು ಸಿ.ಒ.ಡಿ. ತನಿಖೆಯ ವರದಿಯನ್ನು 15 ದಿವಸ ಒಳಗಾಗಿ ಒದಗಿಸಬೇಕು ಎಂದು ನಿರ್ದಿಷ್ಟವಾದ ಆದೇಶ ಕೂಡ ಸರ್ಕಾರ ಕೊಟ್ಟಿದೆ.

(ಗೊಂದಲ)

ಶ್ರೀ ಎಂ. ನಾರಾಯಣಸ್ವಾಮಿ : ಈ ರೀತಿ ಮಾಡುತ್ತೀರಲ್ಲಾ ಇದು ಸರಿಯಲ್ಲ

(ಗೊಂದಲ)

ಉಪಾಧ್ಯಕ್ಷರು : ತಾವು ಇದಕ್ಕೆ ಸಿಗ್ನೇಟರಿಯೇ?

ನಿಯಮ 334 ರ ಮೇರೆಗೆ

ರಾಜ್ಯದಲ್ಲಿ ಹೊಸ ವೈದ್ಯಕೀಯ ಹಾಗೂ ದಂತ ಕಾಲೇಜುಗಳ ಮಂಜೂರಾತಿಗೆ ನಕಾರ

ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ): ಮಾನ್ಯ ಸಭಾಧ್ಯಕ್ಷಣೆಯವರೆ, ಖಾಸಗಿ ಮೆಡಿಕಲ್ ಕಾಲೇಜುಗಳನ್ನು ಹಾಗೂ ಡೆಂಟಲ್ ಕಾಲೇಜುಗನ್ನು ಮಂಜೂರು ಮಾಡುವುದಾಗಿ ಹಿಂದಿನ ಸರ್ಕಾರದವರು ಆಶ್ವಾಸನೆ ಕೊಟ್ಟಿದ್ದರು. ಆದರೆ, ಇನ್ನೂವರೆಗೂ ಇದರ ಬಗ್ಗೆ ಹೊಸ ಸರ್ಕಾರ ಬಂದ ನಂತರೇ ನಿರ್ದಿಷ್ಟವಾದ ಧೋರಣೆಯನ್ನು ಹೊಸಕಾಲೇಜು ಮಂಜೂರು ಮಾಡುವಲ್ಲಿ ತಿಳಿಯಬಯಸಿರುವುದಿಲ್ಲ. ಹೀಗಾಗಿ ಜನರಿಗೆ ಇದರ ಬಗ್ಗೆ ಗೊಂದಲ ಉಂಟಾಗಿರುತ್ತದೆ. ಆದಕಾರಣ, ಹೊಸ ಸರ್ಕಾರದವರು ಮೆಡಿಕಲ್ ಕಾಲೇಜು ಹಾಗೂ ಡೆಂಟಲ್ ಕಾಲೇಜುಗಳನ್ನು ಕೊಡುವ ಬಗ್ಗೆ ಈ ಹೊಸ ಸರ್ಕಾರದ ಧೋರಣೆಯನ್ನು ಪ್ರಕಟಿಸಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಧರ್ಮಸಿಂಗ್ (ಸಮಾಜ ಸಚಿವರು ಮುಖ್ಯ ಮಂತ್ರಿಗಳ ಪರವಾಗಿ): ಮಾನ್ಯ ಸಭಾಧ್ಯಕ್ಷಣೆಯವರೆ ಮುಖ್ಯ ಮಂತ್ರಿಗಳ ಹೇಳಿಕೆ ಈ ಕೆಳಕಂಡಂತೆ ಇದೆ.

ದಿನಾಂಕ 15-9-1990ರ ಸಚಿವ ಸಂಪುಟದ ತೀರ್ಮಾನದ ಪ್ರಕಾರ ರಾಜ್ಯದಲ್ಲಿ ಮುಂದಿನ ಮೂರು ವರ್ಷಗಳವರೆಗೆ ಯಾವುದೇ ಹೊಸ ವೈದ್ಯಕೀಯ ಕಾಲೇಜನ್ನು ತೆರೆಯಬಾರದೆಂದು ನಿರ್ಧರಿಸಿದೆ. ಅದರಂತೆ, ದಿನಾಂಕ 15-9-1993ರವರೆಗೆ ಹೊಸ ವೈದ್ಯಕೀಯ ಕಾಲೇಜನ್ನು ತೆರೆಯಲು ಅವಕಾಶವಿರುವುದಿಲ್ಲ. ಈತನ್ಮಧ್ಯೆ ಕೇಂದ್ರ

ಸರ್ಕಾರ ಆಗಸ್ಟ್ 1992ರಲ್ಲಿ ಹೊರಡಿಸಿರುವ ಆದ್ಯಾದೇಶದ ಪ್ರಕಾರ ರಾಜ್ಯದಲ್ಲಿ ಯಾವುದೇ ಹೊಸ ವೈದ್ಯಕೀಯ ಮತ್ತು ದಂತ ಕಾಲೇಜನ್ನು ತೆರೆಯಬೇಕಾದಲ್ಲಿ ಪ್ರಥಮವಾಗಿ ಕೇಂದ್ರ ಸರ್ಕಾರದ ಮತ್ತುಭಾರತೀಯ ವೈದ್ಯಕೀಯ ಪರಿಷತ್ತು ಹಾಗೂ ಭಾರತೀಯ ದಂತ ಪರಿಷತ್ತಿನ ಅನುಮೋದನೆ ಪಡೆಯಬೇಕಾಗುತ್ತದೆ. ಆದ್ದರಿಂದ, ರಾಜ್ಯದಲ್ಲಿ ವೈದ್ಯಕೀಯ ಮತ್ತು ದಂತ ಕಾಲೇಜನ್ನು ಹೊಸದಾಗಿ ಪ್ರಾರಂಭಿಸಲು ಕೇಂದ್ರ ಸರ್ಕಾರದ ಅನುಮೋದನೆಯ ನಂತರ ಪರಿಶೀಲನೆ ಮಾಡಲಾಗುವುದು. ಭಾರತ ಸರ್ಕಾರ ಹೊರಡಿಸಿರುವ ವೈದ್ಯಕೀಯ ಮತ್ತು ದಂತ ಕಾಲೇಜುಗಳಿಗೆ ಸಂಬಂಧಿಸಿದ ಆಧ್ಯಾದೇಶಗಳ ಸೂಚನೆಗಳನ್ನು ರಾಜ್ಯ ಸರ್ಕಾರ ಕಟ್ಟುನಿಟ್ಟಾಗಿ ಪಾಲಿಸಲಾಗುವುದು.

ವೆಸ್ಟ್ ಆಫ್ ಕಾರ್ಡ್ ರೋಡು ಸಹಕಾರಿ ಅಪೆಕ್ಸ್ ಬ್ಯಾಂಕ್, ಶಾಖೆಯಲ್ಲಿ 5 ಕೋಟಿ ರೂಪಾಯಿಗಳ ಅವ್ಯವಹಾರ.

ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ವೆಸ್ಟ್ ಆಫ್ ಕಾರ್ಡ್ ರೋಡ್ ಶಾಖೆಯಲ್ಲಿ 4-5 ವರ್ಷಗಳಿಂದ ಸತತವಾಗಿ ಅವ್ಯವಹಾರಗಳು ನಡೆದುಕೊಂಡು ಬಂದಿದ್ದು. ಇತ್ತೀಚಿನ ಆಡಿಟ್ ಪ್ರಕಾರ ಸುಮಾರು 5 ಕೋಟಿ ರೂಪಾಯಿ ಹಣ ದುರುಪಯೋಗವಾಗಿದೆ ಎಂದು ಕಂಡು ಬಂದಿದೆ. ಇದಕ್ಕೆ ಹಲವಾರು ಅಧಿಕಾರಿಗಳು ಹಾಗೂ ಹಿಂದೆ ಇದ್ದಂತಹ ಅಧ್ಯಕ್ಷರು ಹಾಗೂ ಇತರರು ಸಹ ಜವಾಬ್ದಾರಿ ಹೊಂದಿರುತ್ತಾರೆ. ಇದೊಂದು ಸ್ಪಾಕ್ ಸ್ಕಾಮ್ ರೀತಿಯಲ್ಲಿ ನಡೆದಿದೆ. ಇಷ್ಟಾದರೂ ಸಹ ಅಧಿಕಾರಿಗಳನ್ನು ಅಥವಾ ನೌಕರರ ಮೇಲೆ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಈ ಬಗ್ಗೆ ಕೂಡಲೇ ಸಿ.ಓ.ಡಿ. ತನಿಖೆಗೆ ಈ ಪ್ರಕರಣವನ್ನು ಒಪ್ಪಿಸಿದರೆ ಜನತೆಗೆ ಸಹಕಾರಿ ಬ್ಯಾಂಕ್‌ಗಳ ಮೇಲಿರತಕ್ಕ ವಿಶ್ವಾಸವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲದಿದ್ದ ಪಕ್ಷದಲ್ಲಿ ಜನತೆಯೂ ಸಹಕಾರ ಬ್ಯಾಂಕ್‌ಗಳ ಬಗ್ಗೆ ತಮ್ಮ ವಿಶ್ವಾಸವನ್ನು ಕಳೆದುಕೊಳ್ಳತಕ್ಕಂಥಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಕೂಡಲೇ ಸಿ.ಓ.ಡಿ ತನಿಖೆಗೆ ಆಜ್ಞೆ ಮಾಡಬೇಕೆಂದು ಸನ್ಮಾನ್ಯ ಸಹಕಾರ ಸಚಿವರನ್ನು ಕೋರುತ್ತೇನೆ.

ಶ್ರೀ ಆರ್. ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು ಸಹಕಾರ ಸಚಿವರ ಪರವಾಗಿ): ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನ ವೆಸ್ಟ್‌ಆಫ್ ಕಾರ್ಡ್‌ರೋಡ್ 2ನೇ ಹಂತದ ಶಾಖೆಯಲ್ಲಿ ಆಗಿರುವ ಹಣ ದುರುಪಯೋಗ ಕುರಿತಂತೆ ಲೆಕ್ಕ ಪತ್ರಗಳ ತನಿಖೆ ನಡೆಸಲು ಬ್ಯಾಂಕು ಕ್ರಮ ಕೈಗೊಂಡಿರುತ್ತದೆ. ಬ್ಯಾಂಕಿನ ಆಂತರಿಕ ಲೆಕ್ಕ ಪರಿಶೋಧಕರ ಮುಖಂಡತ್ವದಲ್ಲಿ ಅಧಿಕಾರಿಗಳ ತಂಡವೊಂದು ತನಿಖೆಯನ್ನು 4ನೇ ಅಕ್ಟೋಬರ್ 1991 ರಂದು ಆರಂಭಿಸಿತ್ತು. ಆಂತರಿಕ ಲೆಕ್ಕ ಪರಿಶೋಧಕರು ಕಾಲ ಕಾಲಕ್ಕೆ ಮಧ್ಯಂತರ ವರದಿಗಳನ್ನು ಕೊಟ್ಟಿದ್ದರು. ಆಂತರಿಕ ಲೆಕ್ಕ ಪರಿಶೋಧಕರ ಅಂತಿಮ ವರದಿಯು 14ನೇ ಡಿಸೆಂಬರ್ 1992ರಂದು ಬ್ಯಾಂಕಿಗೆ ಸಲ್ಲಿಸಲ್ಪಟ್ಟಿರುತ್ತದೆ. ಸದರಿ ವರದಿಯು ಮೇಲ್ಕಂಡ ಶಾಖೆಯ 1981-82 ರಿಂದ 1991-92 ವರೆಗಿನ ವ್ಯವಹಾರಗಳನ್ನು ಒಳಗೊಂಡಿರುತ್ತದೆ. ತನಿಖಾ ಕಾಲದಲ್ಲಿ ಶಾಖೆಯಲ್ಲಿ ಪತ್ತೆ ಹಚ್ಚಲ್ಪಟ್ಟಿರುವ ಹಣ ದುರುಪಯೋಗದ ಒಟ್ಟು ಮೊಬಲಗು ರೂ. 5,13,50 629-99 ಪೈಸೆಗಳಾಗಿರುತ್ತದೆ.